ಅನುಬಂಧ- 2

ಕರ್ನಾಟಕ ಧನವಿನಿಯೋಗ ಸಂಖ್ಯೆ:3, 2002 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, "2002ರ ಕರ್ನಾಟಕ ಧನವಿನಿಯೋಗ ಸಂಖ್ಯೆ (3) ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ, "2002ರ ಕರ್ನಾಟಕ ಧನವಿನಿಯೋಗ ಸಂಖ್ಯೆ(3) ಅನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ಕರ್ನಾಟಕ ಧನವಿನಿಯೋಗ ಸಂಖ್ಯೆ (3)ಅನ್ನು ಪರ್ಯಾಲೋಚಿಸುವುದು.

ಖಂಡ 2 ರಿಂತ 3 ರವರೆಗೆ, ಎರಡೂ ಸೇರಿದಂತೆ

ಅಧ್ಯಕ್ಷರು : ಖಂಡ 2 ರಿಂದ 3ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 3 ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

(ಮೊದಲನೆ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾಪದ ಅಂಗೀಕಾರ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, "2002ರ ಕರ್ನಾಟಕ ಧನವಿನಿಯೋಗ ಸಂಖ್ಯೆ (3) ಅನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "2002ರ ಕರ್ನಾಟಕ ಧನವಿನಿಯೋಗ (ಸಂಖ್ಯೆ-3) ವಿಧೇಯಕ ವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

4. ಶಾಸನ ರಚನೆ

(i) ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕ, 2002

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್.ಎಂ. ಕೃಷ್ಣ : (ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೇ, "2002ನೇ ಸಾಲಿನ ಕರ್ನಾಟಕ ಆರ್ಥಿಕ ಹೊಣೆಗಾರಿಕ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

(ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.)

+ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೇ, ಇದು ಪ್ರಥಮ ಭಾರಿಗೆ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಬಿಲ್ ಎಂದು ಹೇಳಿ ಇದನ್ನು ಮಂಡಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ 2002-2003ನೇ ಸಾಲಿನ ಆಯವ್ಯಯವನ್ನು ಮಂಡಿಸುವಾಗ ಅವರು ಈ ಒಂದು ಆಶ್ವಾಸನೆಯನ್ನು ಸದನಕ್ಕೆ ಕೊಟ್ಟಿದ್ದರು. ನಾನು ಆಯೋವ್ಯಯದ ಬಗ್ಗೆ ಮಾತನಾಡುವಾಗ ಇದನ್ನು ಜ್ಞಾಪಿಸಿದ್ದೆ, ಇದ ಬಗ್ಗೆ ಆಶ್ವಾಸನೆ ಕೊಟ್ಟಿದ್ದಿರಿ, ಇನ್ನೂ ಮಂಡನೆಯಾಗಿಲ್ಲ ಎಂದು. ಅವರು ಆಶ್ವಾಸನೆ ಕೊಟ್ಟ ಮೇರೆಗೆ ಈ ಒಂದು ಮಸೂದೆಯನ್ನು ಸದನದಲ್ಲಿ ಮಂಡಿಸಿದ್ದಾರೆ. ಇದು ನಿಜವಾಗಿಯೂ ಒಂದು ಬಹಳ ಉತ್ತಮವಾದ ಮಸೂದೆ. ಇದನ್ನು ನಾವು ಸ್ವಾಗತ ಮಾಡುತ್ತೇವೆ. ಪ್ರಥಮ ಬಾರಿಗೆ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವ ದೃಷ್ಟಿಯಿಂದ, ಒಂದು ಶಿಸ್ತನ್ನು ತರತಕ್ಕಂಥ ಒಂದು ದೃಷ್ಟಿಯಿಂದ ಈ ಒಂದು ಮಸೂದೆಯನ್ನು ತಂದಿದ್ದಾರೆ. ಅದರಲ್ಲಿ ಬಹಳ ಪ್ರಮುಖವಾಗಿ 2001-2002 ರಿಂದ 2004-2005ರಲ್ಲಿ ಅಂದರೆ ಮೀಡಿಯಂ ಟರ್ಮ್ ಫಿಸ್‌ಕಲ್ ಪ್ಲಾನ್ ನಲ್ಲಿ ನಮ್ಮ ರಾಜ್ಯದ ಸ್ಟೇಟ್ ಡೊಮ್ಯಾಸ್ಟಿಕ್ ಪ್ರಾಡಕ್ಟ್‌ನ್ನು ಸುಮಾರು ಶೇಕಡ 3 ರಷ್ಟು ಇಳಿಸತಕ್ಕಂಥ ಉದ್ದೇಶ ಏನು ಇದೆ, ಸರ್ಕಾರ ಅದನ್ನು ಯಾವ ರೀತಿ ಈಡೇರಿಸಬಹುದು, ಯಾವ ಯಾವ ವಿಚಾರಗಳಲ್ಲಿ ಯಾವ ಯಾವ ನಿಬಂಧನೆಗಳನ್ನು ಹಾಕಬೇಕು ಎಂಬುದರ ಬಗ್ಗೆ ಇದನ್ನು ತಂದಿದ್ದಾರೆ. ಮಾನ್ಯ ಅಧ್ಯಕ್ಷರೇ ಇದರಲ್ಲಿ ಸೆಕ್ಷ್‌ನ್ನು(3)ರಲ್ಲಿ "Medium Term Fiscal Plan to be laid before the legislature" ಅಂತ ಹೇಳಿ ನಾಲ್ಕು ವರ್ಷದಲ್ಲಿ ಅಂದರೆ ಅರ್ಧ ವರ್ಷಕ್ಕೆ ಒಂದು ಸಾರಿ ಎಂ.ಟಿ.ಎಫ್.ಸಿ.ಎಫ್.ಅನ್ನು ಮಂಡಿಸಬೇಕೆಂದು ಹೇಳಿದ್ದಾರೆ. ಅದರಲ್ಲಿ ಒಂದು (i) the balance between revenue receipts and revenue expenditures; ಯಾವ ಯಾವುದಕ್ಕೆ ಸಂಬಂಧಪಟ್ಟಿದ್ದು ಮತ್ತು (ii) the use of capital receipts including borrowings for generating productive assests ಅಂತ ಇದು ಒಂದು ಹೊಸ ಡೆಫನೇಷನ್ ಎಂದು ಕಾಣಿಸುತ್ತಿದೆ. ಇದರಲ್ಲಿ ರೆವಿನ್ಯೂ ಎಕ್ಸ್ ಪೆಂಡೀಚರ್ ಮತ್ತು ರೆವಿನ್ಯೂ ಡಿಫಿಸಿಟ್ಸ್ ರಿಸೀಟ್ಸ್‌ಗೆ ಯಾವ ವ್ಯತ್ಯಾಸಗಳನ್ನು ಕಡಿಮೆ ಮಾಡುತ್ತಾರೆ ಎನ್ನತಕ್ಕಂಥಾದ್ದನ್ನು ಇದರಲ್ಲಿ ತೋರಿಸಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ಮತ್ತು ಇನ್ನೊಂದು (ಇ) ನಲ್ಲಿ the policies of the State Government for the ensuing financial year relating to taxation, expenditure, borrowings (including borrowings by Public Sector Undertakings and Special Purpose Vehicles and other equivalent instruments where liability for repayment is on the State Government, with celing fixed for each agency) ...."

ಎನ್ನುವ ವಿಚಾರವನ್ನು ಹೇಳಿದ್ದಾರೆ.

ಇದರಲ್ಲಿ 5 ವರ್ಷಕ್ಕೆ ಒಂದು ಸಾರಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದರಲ್ಲಿ ನನ್ನ ಒಂದು ಅನುಮಾನ ಏನು ಅಂದರೆ, ಪ್ರತಿ ವರ್ಷಕ್ಕೆ ಒಂದು ಸಲ ಬಜೆಟ್ ಮಂಡಿಸುತ್ತಾರೆ. ಈ ಬಜೆಟ್ ಬಹಳ ಸೀಕ್ರೆಟ್ ಡಾಕ್ಯುಮೆಂಟ್. ಈ 5 ವರ್ಷಕ್ಕೆ ಯಾವ ರೀತಿ ಅಂತ ಅಧನ್ನು ಮೊದಲೇ ಹೇಳಿಬಿಟ್ಟರೆ ಆ ಸೀಕ್ರೆಟನ್ನು ಯಾವ ರೀತಿ ಮೈನ್ ಟೇನ್ ಮಾಡುತ್ತೀರಿ ಎನ್ನತಕ್ಕಂಥಾದ್ದು ಒಂದು. ಅದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಮತ್ತೆ 5 ವರ್ಷ ಒಂದೇ ಸರ್ಕಾರ ಇರುವುದಿಲ್ಲ.

ಸರ್ಕಾರ ಬದಲಾವಣೆಯಾಗುತ್ತದೆ. ಒಂದು ಸರ್ಕಾರಕ್ಕೂ ಮತ್ತೊಂದು ಸರ್ಕಾರಕ್ಕೂ ಪಾಲಿಸಿಗಳು ಬದಲಾವಣೆಯಾದಾಗ ಅದನ್ನು ನೀವೇ ಹೇಗೆ ಮೊದಲೇ ಘೋಷಣೆ ಮಾಡುವುದಕ್ಕೆ ಆಗುತ್ತದೆ? ಅದನ್ನು ಯಾವ ರೀತಿ ಹೇಳಿದ್ದೀರಿ ಎನ್ನುವ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಮತ್ತೆ ಈ ಪಿನ್ ಕಲ್ ಮ್ಯಾನೇಜ್‌ಮೆಂಟ್ ಪ್ರಿನ್ಸಿಪಲ್ಸ್ ಎಂದು ಹೇಳಿದ್ದೀರಿ. ಅದರಲ್ಲಿ ಯಾವ ಯಾವ ವಿಚಾರಗಳನ್ನು ಈ ಮಸೂದೆಯಲ್ಲಿ ಸೇರುತ್ತದೆ ಅಂದರೆ ಸುಮಾರು 17 ಪ್ರಿನ್ಸಿಪಲ್ಸ್ ನ್ನು ಇಧರಲ್ಲಿ ಹೇಳಿದ್ದಾರೆ. ಇದರಲ್ಲಿ ಪ್ರತಿಯೊಂದನ್ನು ಸ್ವಾಗತ ಮಾಡತಕ್ಕಂಥಾದ್ದೇ ಅದರಲ್ಲಿ "maintain Government debt at prudent levels:" ಎಂದಿದೆ ನಾನು ಮೊದಲೇ ಹೇಳಿದ ಹಾಗೆ, 1997ರಲ್ಲಿ ಇದ್ದಂತೆ 9100 ಕೋಟಿ ರೂಪಾಯಿಗಳ ಸಾಲ, 2002-03ರಲ್ಲಿ ಸುಮಾರು 27 ಸಾವಿರ ಕೋಟಿ ರೂಪಾಯಿ ಸಾಲ.

7.10 ಪಿಎಂ

ರಾಜ್ಯಸರ್ಕಾರದಲ್ಲಿ ಸಾಲವನ್ನು ಯಾವ ಮಟ್ಟದಲ್ಲಿಡಬೇಕು ಎಂಬ ಬಗ್ಗೆ ಒಂದು ಪ್ರಿನ್ಸಿಪಲ್ಸ್ ಇಟ್ಟುಕೊಂಡಿದ್ದೀರಿ. Clause 4 "Fiscal Management Principles" - there are 17 principles. Sub-clause (3)/(f) of Clause(4) reads thus:

"(f) ensure within a period of thirteen financial years, beginning form the initial financial year on the 1st day of April, 2002, and ending on the 31st day of March, 2015; that the total liabilities at the end of the last financial year do not exceed twenty five percent of the estimated gross state domestic product for that year;" ಎಂದು ನೀವು ಹೇಳಿರತಕ್ಕಂಥಾದ್ದನ್ನು ಒಪ್ಪಬಹುದು. ಅಂದರೆ 13 ವರ್ಷದೊಳಗಾಗಿ ನಮ್ಮ ಸಾಲದ ಹೊರೆಯನ್ನು ಶೇಕಡ 25 ಪರ್ಸೆಂಟ್ ಅಂದರೆ, ಸ್ಟೇಟ್ ಡೊಮ್ಯಾಸ್ಟಿಕ್ ಪ್ರಾಡಕ್ಟ್ ನಲ್ಲಿ ಏನಿದೆ 25 ಪರ್ಸೆಂಟ್, ಅದಕ್ಕೆ ನಿಗದಿ ಮಾಡುತ್ತೇವೆಂದು ತಾವೇನು ಹೇಳಿದ್ದೀರಿ ಅದರಲ್ಲಿ 15 ವರ್ಷ ಏನೋ ನಿಗದಿ ಮಾಡಿದ್ದೀರಿ. ಆದರೆ, ನಮಗಿರುವ ಭಯ ಏನೆಂದರೆ, 5 ವರ್ಷದಲ್ಲಿ ನೀವು ಸುಮಾರು 9 ಸಾವಿರ ಕೋಟಿಯಿಂದ 27 ಸಾವಿರ ಕೋಟಿವರೆಗೆ ಸಾಲ ಮಾಡಿದರೆ, ಇನ್ನು 13 ವರ್ಷದಲ್ಲಿ ಯಾವ ರೀತಿ ನೀವು ಇದನ್ನು ಕಡಿಮೆ ಮಾಡುತ್ತೀರಿ ಮತ್ತು ಮೈನ್‌ಟೀನ್ ಮಾಡುತ್ತೀರಿ ಎಂಬುದನ್ನು ಹೇಳಬೇಕಾಗುತ್ತದೆ. ಮತ್ತೆ ವಾರ್ಷಿಕ ಗುರಿ ಪ್ರತಿ ವರ್ಷ ನೀವು ಎಷ್ಟೆಷ್ಟು ಕಡಿಮೆ ಮಾಡುತ್ತೀರಿ ಎಂಬುದನ್ನೂ ಹೇಳಬೇಕಾಗುತ್ತದೆ. ಇಲ್ಲದೇ ಹೋದರೆ, ಮೊಗಮ್ಮಾಗಿ 13 ವರ್ಷದಲ್ಲಿ 25 ಪರ್ಸೆಂಟಿಗೆ ಇಳಿಸುತ್ತೇವೆಂದು ಹೇಳಿದ್ದೀರಿ. ವಾರ್ಷಿಕ ಗುರಿ ಒಂದೊಂದು ವರ್ಷಕ್ಕೆ ಎಷ್ಟೆಷ್ಟು ಇಳಿಸುತ್ತೀರಿ ಎಂಬುದನ್ನು ಹೇಳಬೇಕಾಗುತ್ತದೆ. ಮತ್ತೆ ಕೊನೆಯಲ್ಲಿ, Fiseal Responsibility Bill among other things provides for the following - ಅದನ್ನು ಎಂದು ಎಂಟು ಅಂಶಗಳನ್ನು ಹೇಳಿದ್ದೀರಿ. ಇವೆಲ್ಲವನ್ನೂ ಸ್ವಾಗತ ಮಾಡತಕ್ಕಂಥೆ. ಆಧರೆ 7ನೇಯ ಅಂಶ ಏನಿದೆ, "Requiring the Finance Minister to make a statement in both the Houses of the State Legislature explaining any deviation in meeting the obligations cast on the State Government under the legislation",

ಕೋ-ಆಪರೇಷನ್ ಡಿಪಾರ್ಟ್‌ಮೆಂಟಿನಲ್ಲಿ ಒಂದು ಕ್ಲಾಸ್ ಇದೆ. ಇದು ತಮಗೂ ಗೊತ್ತಿದೆ. ಸೆಕ್ಷನ್ 121 ಎಂದು, ಇದನ್ನು ತೆಗೆದಿದ್ದಾರೋ ಏನೋ ಗೊತ್ತಿಲ್ಲ. ಆ ಸೆಕ್ಷನ್ 121 ರ ಪ್ರಕಾರ ಈ ಆಕ್ಟನ್ನು ಎಲ್ಲಾ ಪ್ರಾವಿಷನ್‌ನಲ್ಲೂ ಓವರ್ ರೈಡ್ ಮಾಡಬಹುದು. ಆದರೆ, ಇದರಲ್ಲಿ ಈ ಬಗ್ಗೆ ಕ್ಲಿಯರ್ ಆಗಿ ಹೇಳಿಲ್ಲ. ನೀವು 17 ಪ್ರಿನ್ಸಿಪಲ್ಸ್ ಏನು ಇಟ್ಟುಕೊಂಡಿದ್ದೀರಿ ಅದರಲ್ಲಿ ಯಾವ ಯಾವುದರಲ್ಲಿ ನೀವು ಡೀವಿಯೇಟ್ ಮಾಡತಕ್ಕ ಅವಕಾಶವನ್ನು ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಿಲ್ಲ. "Requiring the Finance Minister to make a statement in both the Houses of Legislature explaining any deviation in meeting the obligaitons...." ಅಂದರೆ, ಈ ಉದ್ದೇಶ ಏನಿದೆ, ಈ ಬಿಲ್ಲನ್ನು ತರತಕ್ಕ ಉದ್ದೇಶ ಸರ್ವ ಆಗುವುದಿಲ್ಲ. ಎಲ್ಲಾ ಕಂಡೀಷನ್ಸ್‌ನ್ನೂ ಓವರ್ ರೈಡ್ ಮಾಡಬಹುದು. ದಯವಿಟ್ಟು ಅದನ್ನು ಸ್ಪೆಸಿಫಿಕ್ ಆಗಿ ಹೇಳಬೇಕಾಗುತ್ತದೆ. ನೀವು ಯಾವುದರಲ್ಲಿ ಡೀವಿಯೇಷನ್ ಮಾಡುತ್ತೀರಿ ಎಂಬುದನ್ನು ನಿಖರವಾಗಿ ಹೇಳಬೇಕು. ನೀವು ಸಾಲ ತರತಕ್ಕಂಥಾದ್ದರಲ್ಲಿ ಮಾಡುತ್ತೀರೋ, ಈ ಹದಿನೇಳರಲ್ಲಿ ಯಾವುದೆಂಬುದನ್ನು ಸ್ಪೆಸಿಫಿಕ್ ಆಗಿ ಹೇಳಿದರೆ, ಇದನ್ನು ನಾವು ನಿಜವಾಗಿಯೂ ಸ್ವಾಗತ ಮಾಡುತ್ತೇವೆ. ಅದನ್ನು ಸ್ಪಷ್ಟವಾಗಿ ಹೇಳಬೇಕೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಿ, ಈ ಮಸೂದೆಯನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕವನ್ನು ಏನು ತಂದಿದ್ದಾರೆ, ಇಲ್ಲಿ ಮುಖ್ಯವಾಗಿ ಉದ್ದೇಶ ಇರುವಂಥಾದ್ದು. "achieving fiscal stability and sustainability in medium term with the clear objectives of eliminating revenue deficit, containing the fiscal deficit to 3% of GSDP...." ಆರ್ಥಿಕ ಶಿಸ್ತನ್ನು ತರಬೇಕೆಂಬ ಮುಖ್ಯವಾದ ಉದ್ದೇಶವಿಟ್ಟುಕೊಂಡು ಏನು ತಂದಿದ್ದಾರೆ ಅದರ ಜೊತೆಗೆ ಪ್ರಾಕ್ಟಿಕಲ್ ಆಗಿ ರಿಸೋರ್ಸ್‌ಸ್ ಮೊಬಲೈಸೇಷನ್ ಸಲುವಾಗಿ ಪ್ರಯತ್ನ ಸರ್ಕಾರದ ಕಡೆಯಿಂದ ಆಗಬೇಕೆಂಬುದು ನನ್ನ ಮೊಟ್ಟಮೊದಲ ಕಳಕಳಿ ಇದೆ. ಏಕೆಂದರೆ, ನಾವು ಕಾನೂನು ಮಾಡುತ್ತೇವೆ, ಎಲ್ಲಾ ಮಾಡುತ್ತೇವೆ; ಅದಕ್ಕೆ ಆರ್ಥಿಕ ಶಿಸ್ತಿನ ಚೌಕಟ್ಟನ್ನು ಮಾಡುತ್ತೇವೆ. ಆದರೆ, ನಿಜವಾಗಿಯೂ, ಫೀಲ್ಡ್‌ನಲ್ಲಿ ಏನಾಗುತ್ತಿದೆ ಎನ್ನುವುದನ್ನು ನಾವು ವಿಚಾರ ಮಾಡಿದಾಗ ಅದಕ್ಕೆ ವ್ಯತಿರಿಕ್ತವಾಗಿ ನಡೆಯುವಂಥಾದ್ದು ಆಗುತ್ತಿದೆ. ಮುಖ್ಯವಾಗಿ ಇಲ್ಲೊಂದು ಉದಾಹರಣೆಯನ್ನು ಕೊಡುವುದಾದರೆ, ಬಹುಶಃ ಪ್ರತಿ ಬಜೆಟ್ ಅಧಿವೇಶನದಲ್ಲೂ ನಾನು ಇದನ್ನು ಪ್ರಸ್ತಾಪ ಮಾಡಿಕೊಂಡು ಬಂದಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು, ಅವರ ಎರಡು ಬಜೆಟ್‌ನಲ್ಲಿ ಹೇಳಿರಬಹುದು. ಕರ ಸಮಾಧಾನ ಯೋಜನೆಯನ್ನು ಹೇಳಿದ್ದಾರೆ. ಎಕ್ಸೆ ಸ್‌ನಿಂದ ಏನು ಹಣ ಬರಬೇಕಾಗಿದೆ, ಇವತ್ತು 436 ಕೋಟಿ ರೂಪಾಯಿಗಳ ಬಾಕಿ ಇದೆ. ಅದರಲ್ಲಿ 162 ಕೋಟಿ ರೂಪಾಯಿಗಳ ಅಸಲು ಹಣ, 233 ಕೋಟಿ ರೂಪಾಯಿಗಳ ಬಡ್ಡಿ ಹಣ: ಎರಡು ವರ್ಷಗಳ ಹಿಂದೆ ಕರ ಸಮಾಧಾನ ಯೋಜನೆಯನ್ನು ನೀವು ಪ್ರಕಟಣೆ ಮಾಡಿದಿರಿ. ಯಾರು ಅಸಲನ್ನು ತುಂಬುತ್ತಾರೆ. ಅವರಿಗೆ ಬಡ್ಡಿಯನ್ನು ಮನ್ನಾ ಮಾಡುವ ನಿರೂಪಣೆ ಮಾಡಿದಿರಿ. ಆ ಯೋಜನೆಯನ್ನು ನೋಟಿಫಿಕೇಷನ್ ಮಾಡಿದ 90 ದಿವಸದೊಳಗಾಗಿ, ಅವರು ಅಸಲು ಹಣವನ್ನು ತುಂಬಬೇಕು. ಆ ನೋಟಿಫಿಕೇಷನ್ ಇವತ್ತಿಗೂ ಆಗಲಿಲ್ಲ. ನಾವು ಪ್ರತಿ ಸದನದಲ್ಲೂ ಕಾರಣವನ್ನು ಕೇಳುತ್ತಿದ್ದೇವೆ.

ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳುವಾಗ, ಅದಕ್ಕೆ ಇನ್ನೂ ರೂಲ್ಸ್ ರೆಗ್ಯುಲೇಷನ್ಸ್, ನಿಯಮಾವಳಿಗಳ ರೂಪವೇ ಆಗಿಲ್ಲವೆಂಬ ಉತ್ತರ ಪ್ರತಿ ಹಂತದಲ್ಲೂ ಬರುತ್ತಿದೆ. ಆ ಕರ ಸಮಾಧಾನ ಯೋಜನೆ ಅಸ್ತಿತ್ವದಲ್ಲಿ ಇದೆಯೋ ಇಲ್ಲವೋ ಎಂಬುದು ಸ್ಪಷ್ಟೀಕರಣವಾಗಬೇಕಾಗಿದೆ. ಇಲ್ಲಿಯವರೆಗೆ ನಮಗೇನು ಸಂಶಯ ಬರುತ್ತಿದೆಯೆಂದರೆ, ಈ 436 ಕೋಟಿ ರೂಪಾಯಿಗಳು ಏನಿದೆ. ಇದು ಹಿಂದಿನಿಂದ ಇರಬಹುದು. 1957, 1958 ನೇ ಇಸವಿಯಿಂದ ಪೆಂಡಿಂಗ್ ಇವೆ, ಕೋರ್ಟ್‌ನಲ್ಲಿ ಲಿಟಿಗೇಷನ್ ಇವೆ, ಅವುಗಳನ್ನೆಲ್ಲಾ ಅವಾಯ್ಡ್ ಮಾಡುವ ಸಲುವಾಗಿ, ಬಡ್ಡಿ ಮನ್ನಾ ಮಾಡಿ ಕೊನೇ ಪಕ್ಷ ಅಸಲು ಹಣವಾದರೂ ಬರಲಿ ಎಂಬ ಉದ್ದೇಶದಿಂದ ತಾವು ಮಾಡಿದಿರಿ ಎಂದು ಹೇಳಿದೆವು. ಆದರೆ, ಎರಡು ವರ್ಷಗಳಾದರೂ ಆ ನೋಟಿಫಿಕೇಷನ್ ಇಷ್ಟೂ ಆಗಲಿಲ್ಲ. ಏಕೆಂದರೆ, ನೋಟಿಫಿಕೇಷನ್ ಇಷ್ಟೂ ಆದ 90 ದಿವಸದೊಳಗೆ ಅಸಲು ಹಣ ತುಂಬಬೇಕಾಗುತ್ತದೆ; ಅಂದಾಗ ಬಡ್ಡಿ ಮನ್ನಾ ಆಗುತ್ತದೆ. ಆದರೆ, ಆ ಯೋಜನೆ ಇನ್ನೂ ಅನುಷ್ಠಾನವಾಗಲಿಲ್ಲ. ಏಕೆ ಆಗಲಿಲ್ಲ ಎನ್ನುವಂಥಾದ್ದು ನನ್ನ ಪ್ರಶ್ನೆ. ಏಕೆಂದರೆ, ಆ ಯೋಜನೆಯನ್ನು ಕೈಬಿಟ್ಟು, ಏನಾದರೂ ಕೋರ್ಟ್‌ನಲ್ಲಿ ಲಿಟಿಗೇಷನ್ ಇರಲಿ, ಅಲ್ಲಿ ಪೈಟ್ ಮಾಡಿ, ಆ 436 ಕೋಟಿ ರೂಪಾಯಿಗಳನ್ನು ರಿಕವರಿ ಮಾಡುವಂಥಾದ್ದನ್ನಾದರೂ ಮಾಡಬೇಕು. ಇದೇನು ಸಣ್ಣ 10-20 ಕೋಟಿಯಲ್ಲ, 436 ಕೋಟಿ ರೂಪಾಯಿಗಳು. ಆದಕ್ಕಾಗಿ, ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣವನ್ನು ಕೊಡಬೇಕಾಗುತ್ತದೆ. ಇವತ್ತು ನೀವು ಇದನ್ನು ಶಿಸ್ತಿನ ಚೌಕಟ್ಟಿನಲ್ಲಿ ತರಬೇಕೆಂಬ ಉದ್ದೇಶ ಇಟ್ಟುಕೊಂಡು ಕಾನೂನು ಮಾಡಲಿಕ್ಕೆ ಹೊರಟಿದ್ದೀರಿ. ಆರ್ಥಿಕ ಶಿಸ್ತನ್ನು ತರಬೇಕೆಂಬ ಉದ್ದೇಶ ಇಟ್ಟುಕೊಂಡಿದ್ದೀರಿ. ಒಂದು ವಿಷನ್ ಇಟ್ಟುಕೊಂಡು ಹೊರಟಿದ್ದೀರಿ. ಆದರೆ, ಪ್ರಾಕ್ಟಿಕಲ್ಲಾಗಿ ಇಂತಹ ಹಣ ಬರುವಂಥಾದ್ದನ್ನು, ತಾವು ಏನೂ ಆಕ್ಷನ್ ತೆಗೆದುಕೊಳ್ಳದೇ ಇದ್ದರೆ, ಇವು ಯಾವುವೂ ಇಂಪ್ಲಿಮೆಂಟ್ ಆಗುವುದಿಲ್ಲ. ಇದರಿಂದ ಮತ್ತೆ ರೆವಿನ್ಯೂ ಡಿಫಿಸಿಟ್ ಬರುವಂಥಾದ್ದೇ ಆಗುತ್ತದೆ. ನಾನು ಹಿಂದೆ ಡಿಮ್ಯಾಂಡ್ಸ್ ಮೇಲೆ ಚರ್ಚೆ ಮಾಡುವಾಗಲೂ ಇದನ್ನು ಹೇಳಿದ್ದೇನೆ. ಈ ಅಬಕಾರಿ ಲಾಭಯಿಂದ ಸೆಕೆಂಡ್ಸ್, ಥರ್ಡ್ಸ್ ಇದರಿಂದ 1450 ಕೋಟಿ ಇದು ಹೆಚ್ಚೂ ಆಗಬಹುದು, ಕಡಿಮೆಯೂ ಆಗಬಹುದು. ಅಷ್ಟೊಂದು ಲೀಕೇಜ್ ಆಗುತ್ತಿದೆ ಎನ್ನುವಂಥಾದ್ದು. ವಿಧಾನ ಪರಿಷತ್ತಿನಲ್ಲಿ ಅದರ ಬಗ್ಗೆ ಚರ್ಚೆಯಾಗಿದೆ; ಇಲ್ಲಿಯೂ ಚರ್ಚೆ ಆಗಿದೆ. ಒಂದು ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡರು; ಇವತ್ತು ಸೆಕೆಂಡ್ಸ್, ಥರ್ಡ್ಸ್ ಲೀಕೇಜನ್ನು ತಡೆಹಿಡಿಯಲಿಕ್ಕೆ ನಮಗೆ ಏಕೋ ಆಗುತ್ತಾ ಇಲ್ಲ ಎಂದು ತಾವು ಅಸಹಾಯಕತನವನ್ನೂ ತೋರಿಸಿದಿರಿ. ಹೀಗಾಗಿ, ಇದು ಆಗಬಾರದು ಎನ್ನುವಂಥಾದ್ದು. ಸಾವಿರಾರು ಕೋಟಿಯಷ್ಟು ಲೀಕೇಜ್ ಆಗಿ ಹೋಗುತ್ತಿದ್ದರೆ, ಮುಂದೆ ಏನಾಗುತ್ತದೆ ಎಂಬುದನ್ನು ನೋಡಬೇಕು. ಇದರಿಂದ ರಿಸೋರ್ಸ್‌ಸ್ ಮೊಬಲೈಸೇಷನ್ ಕೂಡ ಆಗುವುದಿಲ್ಲ, ನಿಮಗೆ ಬಜೆಟರಿ ಪ್ರಾವಿಷನ್ ಆಗುವುದಿಲ್ಲ. ರೆವಿನ್ಯೂ ಡೆಫಿಸಿಟ್‌ನ್ನು ಮತ್ತೆ ಇದೇ ರೀತಿ ಮಾಡಿಕೊಂಡು ಹೋದಂತಾಗುತ್ತದೆ. ಅದಕ್ಕಾಗಿ, ಆ ಶಿಸ್ತನ್ನು ತರುವಂಥಾದ್ದು ಆಗಬೇಕಾಗುತ್ತದೆ. ಆ ದಿಸೆಯಲ್ಲಿ ಏನು ಚಿಂತನೆ ಇದೆಯೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಸನ್ಯಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕ ಈ ಮಸೂದೆಯಲ್ಲಿ ಒಂದು ಬೇಳಕನ್ನು ನಾನು ನೋಡಿರತಕ್ಕಂಥಾದ್ದು ಏನೆಂದರೆ,

ವರ್ಷದ ಆಯವ್ಯಯವನ್ನು ಮಂಡನೆ ಮಾಡತಕ್ಕ ಸಂದರ್ಭದಲ್ಲಿ ಪಾರದರ್ಶಕತೆಯನ್ನು ತರಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಿರುವುದು ನಾನು ಬಹಳ ಪ್ರಮುಖವಾಗಿ ಗಮನಿಸಿರತಕ್ಕ ಅಂಶ. As far as possible, the State Government shall take suitable measures to ensure greater transparency in its fiscal operations in public interest and minimise secrecy of preparation of budget...." This is only a very important salient feature according to me. ನನಗೆ ಗೊತ್ತಿರುವ ಹಾಗೆ ವಿದೇಶಗಳಲ್ಲಿ, ಮುಂದುವರೆದಿರತಕ್ಕಂಥ ದೇಶಗಳಲ್ಲಿ ಯಾವುದಾದರೊಂದು ಕಟ್ಟಡವನ್ನು ಕಟ್ಟಬೇಕೆಂದು ಹೇಳಿದರೂ ಸಹಿತ ಅಧರ ಆರ್ಕಿಟೆಕ್ಟ್ ಹೇಗಿರಬೇಕೆಂಬುದರ ಬಗ್ಗೆಯೂ ಒಂದು ಕಾಂಪಿಟೇಷನ್‌ನ್ನು ಏರ್ಪಾಡು ಮಾಡುತ್ತಾರೆ. ಇದಕ್ಕೋಸ್ಕರ ಜಡ್ಜಸ್ ಇರುತ್ತಾರೆ. ಈ ವಿಚಾರಗಳೆಲ್ಲಾ ತಮಗೆ ಗೊತ್ತಿದೆ. ಆ ಜಡ್ಜಸ್ ಕೊಟ್ಟಿರತಕ್ಕ ತೀರ್ಪನ್ನೇ ಅವರು ಫೈನಲ್ ಆಗಿ ತೆಗೆದುಕೊಂಡು ಅಂತಹವರಿಗೆ ಕಾಂಟ್ರಾಕ್ಟನ್ನು ಕೊಡುತ್ತಾರೆ. ದೃಷ್ಟಿಯಿಂದಾಗಿ ಅನೇಕ ಸಂದರ್ಭಗಳಲ್ಲಿ ನಾವು ಇತ್ತೀಚಿನ ದಿನಗಳಲ್ಲಿ ಮಾನ್ಯ ಹಣಕಾಸಿನ ಸಚಿವರು ನಮ್ಮ ಚೇಂಬರ್ ಆಫ್ ಕಾಮರ್ಸ್‌ನವರನ್ನು ಕರೆಸತಕ್ಕಂಥಾದ್ದು ಮತ್ತೆ ಬೇರೆ ಬೇರೆ ಟ್ರೇಡ್ ರೆಪ್ರೆಸೆಂಟೇಟಿವ್ಸ್‌ನ್ನು ಕರೆಸತಕ್ಕಂಥಾದ್ದು, ಇಂಥ ಎಲ್ಲಾ ಕೆಲಸಗಳೇನಿವೆ ಇವುಗಳು, to some extent it is good. ಅವರ ತೊಂದರೆಗಳೇನು ಎಂದು ತಿಳಿದುಕೊಳ್ಳುವುದಕ್ಕೆ ಇದು ಸಹಕಾರಿಯಾಗುತ್ತದೆ. ಏಕೆಂದರೆ ಯಾವುದೇ ಒಂದು ವ್ಯವಸಾಯವಾಗಲೇ, ಕೃಷಿಯಾಗಲಿ, ಕೈಗಾರಿಕೆಯಾಗಲೀ, ಈ ಟ್ರೇಡ್‌ಗೆ ಸಂಬಂಧಪಟ್ಟ ಹಾಗೆ ಇರುವುದರಿಂದ ಟ್ರಾನ್ಸ್ ಫೆರೆನ್ಸಿಯನ್ನು ಮೈನ್‌ಟೇನ್ ಮಾಡಲಿಕ್ಕೆ ಇದು ಬಹಳ ಉಪಯೋಗವಾಗುತ್ತದೆ ಎಂದು ನಾನು ಈ ಮಸೂದೆಯಲ್ಲಿ ಕಂಡುಕೊಂಡಿರತಕ್ಕಂಥ ವಿಚಾರ. ಹಾಗೆಯೇ ರೈತರ ಪ್ರತಿನಿಧಿಗಳನ್ನು ಕೂಡ ಇನ್ನು ಮುಂದೆ ಕರೆಸತಕ್ಕಂಥ ಒಂದು ಕೆಲಸವಾಗಬೇಕು. ಏಕೆಂದರೆ ಉದಾಹರಣೆಗೆ ನಮ್ಮಲ್ಲಿರತಕ್ಕಂಥ ಅನೇಕ ಕಮರ್ಷಿಯಲ್ ಕ್ರಾಪ್ಸ್ ಏನಿವೆ ಅವುಗಳನ್ನು ಬೆಳೆಯತಕ್ಕಂತಹ ಅವರು ಬಹಳ ತೊಂದರೆಯಲ್ಲಿದ್ದಾರೆ. ಅಂಥವರನ್ನೆಲ್ಲಾ ನಾವು ಬಜೆಟ್ ಪ್ರಿಪೇರ್ ಮಾಡುವುದಕ್ಕೆ ಮುಂಚೆ ನಾವು ಹೀಗೆ ಮಾಡಬೇಕು, ನಿಮ್ಮ ತೊಂದರೆಗಳೇನು ಎಂದು ತಿಳಿದುಕೊಳ್ಳುವ ದೃಷ್ಟಿಯಿಂದಾಗಿ ಈ ವಿಧೇಯಕವು ಬಹಳ ಅನುಕೂಲವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಬಾಕಿ, this is a teethless legislation, according to me. ಇದನ್ನು ನೀವು ಮಾಡಲಿಲ್ಲ ಅಂದರೆ ಪ್ರನಿಷ್ ಮೆಂಟ್ ಏನೂ ಇಲ್ಲ. ಇನ್ನೊಂದು ವಿಚಾರ ಇದೆ, ಅದನ್ನು ಮಾನ್ಯ ಮುಖ್ಯಮಂತ್ರಿಯವರು ಸದನಕ್ಕೆ ತಿಳಿಸಿದರೆ ಬಹಳ ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೇನೆ. ಇದರಲ್ಲಿ ಇವರು ಏನು ಹೇಳಿದ್ದಾರೆ? ಅಧಿಕಾರಿಗಳು ಏನಾದರೂ ಒಂದು ಕ್ರಮವನ್ನು ತೆಗೆದುಕೊಂಡರೆ, ಯಾರೂ ಕೋರ್ಟ್‌ಗೆ ಹತ್ತಬಾರದು, ಎನ್ನತಕ್ಕಂಥಾದ್ದನ್ನು ಸಹಿತ "in good faith" ಸದ್ಭಾವನೆಯಿಂದ ಕೈಗೊಳ್ಳುವ ಕ್ರಮಕ್ಕೆ ರಕ್ಷಣೆ. ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಮೇರೆಗೆ ಮಾಡಲಾದ ನಿಯಮಗಳ ಅಡಿಯಲ್ಲಿ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಯಾವುದೇ ಕ್ರಮಕ್ಕಾಗಿ ರಾಜ್ಯ ಸರಕಾರದ ಅಥವಾ ರಾಜ್ಯ ಸರಕಾರದ ಯಾವೊಬ್ಬ ಅಧಿಕಾರಿಯ ವಿರುದ್ಧ ಯಾವುದೇ ದಾವೆಯ ಅಭಿಯೋಜನೆ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ- ಎಂದು ಹೇಳಿದ್ದಾರೆ. ಇದು ಅಷ್ಟೊಂದು ಸಮಂಜಸವೆಂದು ನನಗಂತೂ ಅನ್ನಿಸುವುದಿಲ್ಲ. ಅಟ್‌ಲೀಸ್ಟ್ ರೂಲ್ಸ್‌ನ್ನು

ಫ್ರೇಮ್ ಮಾಡತಕ್ಕಂಥ ಸಂದರ್ಭದಲ್ಲಿ ಅದರ ಕಡೆಗೆ ಸ್ವಲ್ಪ ಗಮನ ಕೊಡುವುದು ಸೂಕ್ತ ಎನ್ನುವುದನ್ನು ಹೇಳಿ, ನಾವು ಇದನ್ನು ಒಪ್ಪುತ್ತೇವೆ.

+ ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ರಾಜ್ಯದಲ್ಲಿ ಹಣಕಾಸಿನ ವ್ಯವಸ್ಥೆಯೊಳಗಡೆ ಶಿಸ್ತು ತರುವಂಥ ದಿಸೆಯಲ್ಲಿ ಇದು ಒಂದು ಒಳ್ಳೆಯ ಹೆಜ್ಜೆ ಎಂದು ಹೇಳುತ್ತಾ, ನಾನು ಇದನ್ನು ಸ್ವಾಗತ ಮಾಡುತ್ತೇನೆ. ಪ್ರಮುಖವಾಗಿ ಕಳೆದ ಎರಡು ವರ್ಷಗಳ ಕಾಲದ ಬಜೆಟ್‌ನ್ನು ನಾವು ವಿಶ್ಲೇಷಣೆ ಮಾಡುವಂಥ ಸಂದರ್ಭದಲ್ಲಿಯೂ ಕೂಡ ಬಜೆಟ್ ನ್ನು ಮಂಡನೆ ಮಾಡಿದ ನಂತರದಲ್ಲಿ ಮತ್ತು ಆ ಬಜೆಟ್‌ನ ಅಂತ್ಯದಲ್ಲಿ ವಿಶೇಷವಾಗಿ ನಿಜವಾದಂಥ ಏನು ಖರ್ಚಾಗಿದೆ, ಬಜೆಟ್ ಎಸ್ಟಿಮೇಟ್ ಎಷ್ಟು ಇತ್ತು ಎನ್ನುವಂತ ವಿಚಾರಗಳನ್ನು ತಿಳಿದುಕೊಂಡಾಗ ವರ್ಷದ ಕೊನೆಯಲ್ಲಿ ವಿಶೇಷವಾದಂಥ ಕೆಲವು ಸೆಕ್ಟಾರ್‌ಗಳಲ್ಲಿ ಆಗಬೇಕಾಗಿರುವಂಥ ಕೆಲವು ಖರ್ಚುಗಳನ್ನು ಕೂಡ ಮಾಡಿಲಿಕ್ಕೆ ಆಗದಿರುವಂಥ ರೀತಿಯಲ್ಲಿ ಹಣಕಾಸಿನ ಪರಿಸ್ಥಿತಿಯು ಕ್ಲಿಷ್ಟವಾಗಿರುವಂತಾದ್ದು ಇತ್ತು. ಹಾಗಾಗಿ ಈ ರಿವಿಜನ್ ಏನಿದೆ, ಅದನ್ನು ಅರ್ಧವರ್ಷದಲ್ಲಿ ಆಗುವಂಥ ವ್ಯವಸ್ಥೆಗಳನ್ನು ರಿವಿಜನ್ ಮಾಡುವಂಥ ಒಂದು ಪ್ರಾವಿಜನ್ ಏನಿದೆ, ಆ ವಿಚಾರವು ಒಳ್ಳೆಯ ಸ್ವಾಗತ ಮಾಡುವಂತಾದ್ದು ಆಗಿದೆ. ಎರಡನೆಯ ಅಂಶವನ್ನು ಸ್ವಾಗತ ಮಾಡುವ ವಿಚಾರ ಏನೆಂದರೆ, ರಾಜ್ಯ ಸರಕಾರದಲ್ಲಿ ಅಲ್ಲದೇನೇ ಬೇರೆ ಬೇರೆ ಸಂಸ್ಥೆಗಳಿಗೆ ಯಾವುದೇ ಫೈನಾನ್ ಷಿಯಲ್ ಇನ್ಸ್ ಟಿಟ್ಯೂಷನ್ ಗಳಿಂದ ಸಾಲವನ್ನು ತೆಗೆದುಕೊಳ್ಳುವಂಥ ಸಂದರ್ಭದಲ್ಲಿಯೂ ಕೂಡ ಕೇವಲ ರಾಜ್ಯಸರ್ಕಾರಕ್ಕೆ ಮಾತ್ರ ತಿಳಿಸುವಂತಾದ್ದು ಇತ್ತು. ಅವರ ಹಣಕಾಸಿನ ಸಾಲವನ್ನು ತರುವಂಥ ಸಂದರ್ಭದಲ್ಲಿ ಕೊನೆಯಲ್ಲಿ ರಾಜ್ಯಸರ್ಕಾರಗಳೇ ಜವಾಬ್ದಾರಿಯನ್ನು ಹೊರುವಂಥ ವ್ಯವಸ್ಥೆಗಳಿತ್ತು. ಆ ಒಂದು ದೃಷ್ಟಿಯಿಂದ ತಾವು ತಂದಿರುವಂಥ ಬಿಲ್‌ನಲ್ಲಿ ಅದನ್ನು ಸೇರಿಸಿರುವಂತಾದ್ದು ಜೊತೆಗೆ ಆ ಲಯಬಿಲಿಟಿ ಕೂಡ ಅಂದರೆ ಆ ಒಂದು ಸಂಸ್ಥೆಯು ತರುವಂಥ ಸಾಲ ಏನಿದೆ, ಅದರ ಲಯಬಿಲಿಟಿ ಕೂಡ ರಾಜ್ಯ ಸರಕಾರಕ್ಕೆ ಸೇರಿದ್ದು ಎನ್ನುವಂಥ ವಿಚಾರವೇನಿದೆ ಅದನ್ನು ಶಾಸನ ರೂಪದಲ್ಲಿ ತರುವಾಗ ಫೈನಾಸ್ ಷಿಯಲ್ ಡಿಸಿಪ್ಲಿನ್ ಬರುವಂಥ ಕೆಲಸವನ್ನು ಇಲ್ಲಿ ಮಾಡಿದ್ದಾರೆ ಎಂಬ ಅಂಶವನ್ನು ಹೇಳುತ್ತಾ, ವಿಶೇಷವಾಗಿ ಈ ಒಂದು ದೃಷ್ಟಿಯಲ್ಲಿ ಮಾನ್ಯ ಸಿಂದ್ಯರವರು ಆ ಮಾತನ್ನು ಹೇಳಿದ್ದರು. ಯಾವುದೇ ವಿಚಾರದಲ್ಲಿ ಭಾವನೆಗಳು ಏನೇ ಇರಲಿ, ಸದ್ಭಾವನೆಗಳು ಎಂದು ತೆಗೆದುಕೊಂಡರೂ ಕೂಡ ತೆಗೆದುಕೊಂಡಂಥ ಹಣ, ಸಾಲ, ಅದನ್ನು ಉಪಯೋಗಿಸುವಂಥ ರೀತಿ ಮುಂತಾಗಿ ಇವೆಲ್ಲವೂ ಕೂಡ ಅಧರ ಉದ್ದೇಶಗಳು ಸಾರ್ಥಕವಾದಾಗ ಯಾವ ಸಮಸ್ಯೆಗಳೂ ಇರುವುದಿಲ್ಲ. ಆದರೆ ಸದ್ಭಾವನೆ ಇದ್ದರೂ ಕೂಡ ಆಗುವಂಥ ಖರ್ಚು ಬೇರೆ ವಿಚಾರಗಳಲ್ಲಿ ನ್ಯಾಯಾಲಯಕ್ಕೆ ಹೋಗುವಂಥ ವಿಚಾರದಲ್ಲಿ ಏನೊಂದು ಕ್ಲಾಸ್ ಇದೆ ದಯಮಾಡಿ ಅದೊಂದನ್ನು ತೆಗೆಯಬೇಕು.ಏಕೆಂದರೆ, ಇಡೀ ಅಕೌಂಟೆಬಿಲಿಟಿಯನ್ನು ಫಿಕ್ಸ್ ಮಾಡುವ ವ್ಯವಸ್ಥೆಗೆ ತಾವು ಹೋಗಿರುವುದರಿಂದ ಆ ಒಂದು ಕ್ಲಾಸ್‌ಗೆ ತಾವು ಎಕ್ಸ್‌ಂಪ್‌ಷನ್ ಕೊಟ್ಟರೆ, ತಾವೇನು ಈ ಬಿಲ್‌ನ್ನು ತಂದಿದ್ದೀರಿ ಇದನ್ನು ಇನ್ ಟೋಟೋ ನಾವು ಆಕ್ಸೆಪ್ಟ್ ಮಾಡಬಹುದೆಂಬ ಭಾವನೆ ನಮಗೆ ಇದೆ ಹಾಗೂ ನಾವು ಇದನ್ನು ಸ್ವಾಗತ ಮಾಡುತ್ತೇವೆ.

ಶ್ರೀ. ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಯವರು): ಸನ್ಮಾನ್ಯ ಅಧ್ಯಕ್ಷರೇ, ನಾನು ಮಂಡಿಸಿದ ಈ ಮಸೂದೆಗೆ ಸಾರ್ವತ್ರಿಕವಾಗಿ ಸ್ವಾಗತವನ್ನು ಕೊಟ್ಟಿರುವುದಕ್ಕೋಸ್ಕರ ಮಾನ್ಯ ಸದಸ್ಯರುಗಳಿಗೆ ನಾನು ಅಭಾರಿಯಾಗಿದ್ದೇನೆ. ತಾವು ಈ ಮಸೂದೆಯ ಮೂಲಕ ನಮ್ಮ ಬಜೆಟರಿ ಎಕ್ಸ್‌ಸೈಸ್‌ಗೆ

ಒಂದು ಟ್ರಾನ್ಸ್‌ಪರೆನ್ಸಿ, ಮತ್ತು ಫಾಲೋವರ್ಕ್ ಎರಡನ್ನೂ ಕೂಡ ಈ ಡಾಕ್ಯುಮೆಂಟ್‌ನಲ್ಲಿ ಈ ಮಸೂದೆಯಲ್ಲಿ ನಾವು ನೋಡಬಹುದಾಗಿದೆ. ಇದುವರೆವಿಗೂ ಇದ್ದ ಪದ್ಧತಿ ಏನೆಂದರೆ ವರ್ಷಕ್ಕೆ ಒಂದು ಸಾರಿ ಈ ಬಜೆಟ್ ವಿಚಾರದಲ್ಲಿ ನಾವು ತಲೆಕೆಡಿಸಿಕೊಳ್ಳುತ್ತಿದ್ದೆವು. ಆದರೆ there are various stages, ಬೇಕಾದಷ್ಟು ಫೆಟ್ಟಗಳನ್ನು ನಾವು ಸೃಷ್ಟಿ ಮಾಡಿದ್ದೇವೆ. ಆದ್ದರಿಂದ ಒಂದಕ್ಕೆ ಒಂದು ಸಂಬಂಧವನ್ನು ಕಲ್ಪಿಸಲಿಕ್ಕೆ ಸಾಧ್ಯವಾಗಿದೆ. ಆದ್ದರಿಂದ ಈ ಒಂದು ಎಕ್ಸ್ ಪೆರಿಮೆಂಟಲ್ ಮೆಷರ್ ಏನಿದೆ, ಇದು ನಮಗೆ ಇನ್ನೂ ಹೆಚ್ಚು ಅನುಭವಕ್ಕೆ ಬಂದಮೇಲೆ ಇದಕ್ಕೆ ಇನ್ನೂ ಏನು ಸೇರಿಸಬಹುದು, ಹೇಗೆ ಇದನ್ನು ಇನ್ನೂ ಹೆಚ್ಚು ಅಕೌಂಟೆಬಲ್ ಆಗಿ ಮಾಡಲಿಕ್ಕೆ ಸಾಧ್ಯ ಎನ್ನತಕ್ಕಂಥಾದಕ್ಕೆ ಮುಕ್ತ ವಾದಂತಹ ಅವಕಾಶ ಇದೆ. ತಾವುಗಳು ಸಲಹೆಗಳನ್ನು ಕೊಟ್ಟರೆ ಅದನ್ನು ನಮ್ಮ ಮುಂದಿನ ವರ್ಷದ ರೆಸ್ಪಾನ್ಸಿಬಿಲಿಟಿ ಬಿಲ್-2003 ಆದರಲ್ಲಿ ಅದನ್ನು ಸೇರಿಸಲಿಕ್ಕೆ ಪ್ರಯತ್ನಗಳನ್ನು ನಾವು ಮುಂದುವರಿಸಿಕೊಂಡು ಹೋಗಬಹುದಾಗಿದೆ.

+ಶ್ರೀ. ಬಿ.ಸೋಮಶೇಖರ್: ಮಾನ್ಯ ಅಧಕ್ಷರೇ, ತಾವೇನು ಸದುದ್ದೇಶದಿಂದ ಈ ಬಿಲ್‌ನ್ನು ಏನು ತಂದಿದ್ದೀರಿ ಅದರಲ್ಲಿನ ಪೂರ್ಣ ಉದ್ದೇಶಗಳು ಸಫಲವಾಗಬೇಕಾದರೆ ಒಂದು ವಿಚಾರವನ್ನು ನಾವು ಪರಿಶೀಲಿಸಬೇಕಾಗಿದೆ. ಇದರಲ್ಲಿ ಯಾವುದೇ ವಯಲೇಷನ್ ಮಾಡಿದರೂ ಕೂಡ, ಉದ್ದೇಶಪೂರ್ವಕವಾಗಿ ಮಾಡಿದರೂ ಅಧಿಕಾರಿಗಳ ಮೇಲಾಗಲೀ, ... ನೀವು ಸರಕಾರದ ಮೇಲೆ ಕ್ರಮ ತೆಗೆದುಕೊಳ್ಳುವುದು ಬೇಡ.. ಈಗ ಒಂದನ್ನು ಇನ್ನೊಂದಕ್ಕೆ ಡೈವರ್ಟ್ ಮಾಡಬಹುದು. ಆಕ್ಟ್‌ನಲ್ಲಿ ಹಾಗೆ ಡೈವರ್ಟ್ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತೀರಿ. ಆದರೆ ಇಲ್ಲಿ ಡೈವರ್ಟ್ ಮಾಡಿದರೂ ಕೂಡ ಯಾವ ಕ್ರಮವನ್ನು ತೆಗೆದುಕೊಳ್ಳವುದಿಲ್ಲವೆಂದು ಕೂಡ ಹೇಳುತ್ತೀರಿ. ಹೀಗೆ ಇಲ್ಲಿ ಏನು ಬೇಕಾದರೂ ಮಾಡಬಹುದು. ಆದ್ದರಿಂದ ಆ ಒಂದು ವಿಚಾರವನ್ನು ತೆಗೆದು ಹಾಕಿದರೆ ನಾವ ಇದನ್ನು ಸ್ವಾಗತ ಮಾಡಬಹುದು It is a teethless ಆದನ್ನ ಒಂದನ್ನು ತೆಗೆದು ಹಾಕಿದರೆ ಇದು ನಿಜವಾಗಿಯೂ ಒಳ್ಳೆಯ ಬಿಲ್ ಎಂದು ಹೇಳಬಯಸುತ್ತೇನೆ. ಏಕೆಂದರೆ ಇಲ್ಲಿ ಸ್ವಲ್ಪವಾದರೂ ಕ್ರಮ ತೆಗೆದುಕೊಳ್ಳುವ ವಿಚಾರ ಇರಬೇಕಾಗುತ್ತದೆ. ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಮಾಡಿದಾಗ ಕ್ರಮ ತೆಗೆದುಕೊಳ್ಳುವಂತಿರಬೇಕು.

ಶ್ರೀ. ಎಸ್.ಎಂ.ಕೃಷ್ಣ: ಈಗ ತತ್‌ಕ್ಷಣ ಗಲ್ಲಿಗೆ ಹಾಕುವುದಕ್ಕೆ ಆಗುವುದಿಲ್ಲ. ಡೀವಿಯೇಷನ್ ಮಾಡಿದ ತತ್‌ಕ್ಷಣ ಹಾಗೆ ಎಂದು ಹೇಳಿ. ಏಕೆಂದರೆ ನಾನು ಆಗಲೇ ಹೇಳಿದ್ದೇನೆ. It is an experimental measure, first time we have taken up this one ಇದನ್ನು ಇನ್ನೂ ಪರಫೆಕ್ಟ್ ಫೈನ್ ಟ್ಯೂನಿಂಗ್ ಮಾಡಬೇಕಾಗಿದೆ, ಆದ್ದರಿಂದ ಇನ್ನೂ ಹೆಚ್ಚು ಅಕೌಂಟೆಬಲ್ ಮಾಡಲಿಕ್ಕೆ ನಾವು ಪ್ರಯತ್ನಗಳನ್ನು ಮುಂದುವರಿಸುತ್ತೇವೆಂದು ಹೇಳಿದ್ದೇನೆ. ಈ ಸೆಕ್ಯುರಿಟೀಸ್, ಮತ್ತು ಬರ, ಪ್ರವಾಹ ರಿಸಿಷನ್ ಮುಂತಾದವು ಇವೆಲ್ಲಾ ಇದೆ. ಆದ್ದರಿಂದ ತಾವುಗಳು ಒಪ್ಪಿಗೆ ಕೊಟ್ಟರೆ ಮುಂದಿನ ವರ್ಷದಲ್ಲಿ ಇನ್ನೂ ಹೆಚ್ಚು ತಮ್ಮ ಒಪ್ಪಿಗೆ ಸಿಗುವ ಹಾಗೆ ಮಾಡಬಹುದು. ಮತ್ತೆ ತಾವುಗಳು ಹೇಳಿದಿರಿ.. ಆ ಎಕ್ಸ್ ಸ್ ್ ಕರಸಮಾಧಾನ ಬಗ್ಗೆ ಈಗ ರೂಲ್ಸ್‌ಗಳನ್ನೆಲ್ಲಾ ಫ್ರೇಮ್ ಮಾಡಿದ್ದೇವೆ. ಆದ್ದರಿಂದ ಅತಿ ಶೀಘ್ರದಲ್ಲಿಯೇ ಅದನ್ನು ಮಾಡುತ್ತೇವೆ 1942ನೇ ಇಸವಿಯಿಂದ ಅದು ಬಂದಿರತಕ್ಕಂಥಾದ್ದು. ಎಷ್ಟೋ ಜನ ಅವರು ಇದ್ದಾರೋ ಇಲ್ಲವೋ ಗೊತ್ತಿಲ್ಲ.

ಅಧ್ಯಕ್ಷರು: ಈಗ 2002ನೇ ಸಾಲಿನ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕ ಚರ್ಚೆ ಮುಗಿದಿದೆ. ಈಗ ಅದನ್ನು ಮತಕ್ಕೆ ಹಾಕುತ್ತೇನೆ.

ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕ 2002

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕ-2002ವನ್ನು ಪರ್ಯಾಲೋಚಿಸುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು)

ಖಂಡ 2ರಿಂದ 11ರವರೆಗೆ ಎರಡೂ ಸೇರಿದಂತೆ

ಅಧ್ಯಕ್ಷರು: "ಖಂಡ 2ರಿಂದ 11ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 11ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಮೊದನೆಯ ಖಂಡ ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ: "ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, "ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕ-2002ನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕ-2002ನ್ನು ಅಂಗೀಕರಿಸುವುದು."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

ii. ಕರ್ನಾಟಕ ಸರ್ಕಾರಿ ಮೇಲಿನ ಮಿತಿ (ತಿದ್ದುಪಡಿ) ವಿಧೇಯಕ, 2002

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿಬಿ..ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ): ಅಧ್ಯಕ್ಷರೇ "2002ರ ಕರ್ನಾಟಕ ಸರ್ಕಾರಿ ಖಾತರಿಗಳ ಮೇಲಿನ ಮಿತಿ (ತಿದ್ದುಪಡಿ) ವಿಧೇಯಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲ್ಪಟ್ಟಿತು

ಶ್ರೀ. ಪಿಜಿಆರ್.ಸಿಂಧ್ಯಾ (ಕನಕಪುರ): ಮಾನ್ಯ ಅಧ್ಯಕ್ಷರೇ ಇದು ಬೆಟ್ಟ ಅಗೆದು ಇಲಿ ಹಿಡಿದ ಹಾಗಾಗಿದೆ. ಬಡ್ಡಿ ಮನ್ನಾ ಮಾಡಬೇಕು ಎಂದು ನಾವು ಎರಡೂವರೆ ವರ್ಷಗಳಿಂದ ಹೇಳಿಕೊಂಡು ಬಂದೆವು. ಆದೇನೋ ಕಾಂಗ್ರೆಸಿನವರು ಅಧಿಕಾರಕ್ಕೆ ಬಂದರೆ ಬಡ್ಡಿ ಮನ್ನಾ ಮಾಡುವುದಕ್ಕೆ ಅವರಿಗೆ ಅಮರ್ಷನ್, ಮೊದಲ ಬಾರಿಗೆ ನಾನು ಮುಖ್ಯಮಂತ್ರಿಯವರನ್ನು ಕೇಳಿದ್ದು, ಪ್ರಧಾನಮಂತ್ರಿಗಳ ಜೊತೆ ನಾನು ಡೈಲಾಗ್ ಮಾಡಿದೆ, ಅದರ ಬಗ್ಗೆ ಕನ್‌ಸಿಡರ್